**ಸಾಕ್ಷಿಯನ್ನು ಇಂದು ದಿನಾಂಕ 13.12.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್. ಎಲ್. ಎ. ಆರೋಪಿತರ ಪರ ವಕೀಲರಿಂದ**

ಆರೋಪಿತರು ನನಗೆ ಅಣ್ಣ-ತಮ್ಮಂದಿರು ಆಗಬೇಕು. ದೂರುದಾರರು ಗೈರನ ಜಮೀನನ್ನು ಸರ್ವೇ ಮಾಡಲು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಗೈರನ ಜಮೀನಿಗೆ ಹತ್ತಿ ಯಾರ ಜಮೀನುಗಳು ಇರುತ್ತವೆ ಎಂದು ಗೊತ್ತಿಲ್ಲ. ಗೈರನ ಜಮೀನದ ಚಕ್ಕುಬಂದಿಗಳಲ್ಲಿ ಒಟ್ಟು 10 ಜಮೀನುಗಳು ಇರುತ್ತವೆ ಎಂದರೆ ಸರಿಯಲ್ಲ. ದೂರುದಾರರು ಆರೋಪಿತರ ಜಮೀನುಗಳನ್ನು ಎತ್ತಿಹಾಕುವ ಉದ್ದೇಶದಿಂದ ಸರ್ವೇ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನನ್ನ ವೈಯಕ್ತಿಕ ದ್ವೇಷ ಸಾಧಿಸುವ ಉದ್ದೇಶದಿಂದ ದೂರುದಾರರೊಂದಿಗೆ ಶಾಮಿಲು ಆಗಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಇವರಿಗೆ ಹೊಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಚಾಸಾ-1 ಇವರು ಈ ಹಿಂದೆ ಗ್ರಾಮ ಪಂಚಾಯತಿ ಚುನಾವಣೆಗೆ ನಿಂತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ 1 ನೇ ಆರೋಪಿ ದೂರುದಾರರ ವಿರುದ್ಧ ಚುನಾವಣೆಯಲ್ಲಿ ಗೆದಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಚಾಸಾ-1 ಇವರಿಗೆ ಸಹಾಯ ಮಾಡಿದ್ದೆ ಎಂದರೆ ಸರಿಯಲ್ಲ. ಚಾಸಾ-1 ಇವರು ಚುನಾವಣೆಯಲ್ಲಿ ಸೊತ್ತಿದ್ದರಿಂದ ನನಗೆ ಆರೋಪಿತರ ವಿರುದ್ಧ ಈಗ ಸುಳ್ಳು ಸಾಕ್ಷ್ಯ ನುಡಿಯಲು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಘಟನೆ ಆಗಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕಟ್ಟಿಗೆಯಿಂದ ಚಾಸಾ-1 ಇವರಿಗೆ ಹೊಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಕ್ಕಲುತನ ಮಾಡುತ್ತೇನೆ. ಘಟನಾ ಸ್ಥಳದಲ್ಲಿ ಸಾಕಷ್ಟು ಜನ ಸಂದಣಿ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಜನರ ಓಡಾಟ ಇರುತ್ತದೆ ಎಂದರೆ ಸರಿ. ಆರೋಪಿತರು ನನಗೆ ಹೊಡೆ-ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH